ಲೆವಿ ದರ ಹೆಚ್ಚಾಗಿದ್ದು ನಮ್ಮ ರೈತರಿಗೆ ಆ ಸೌಲಭ್ಯವನ್ನು, ದರವನ್ನು ಸರ್ಕಾರ ಮಧ್ಯೆ ಪ್ರವೇಶಿಸಿ ದೊರಕಿಸಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೇ, ಈ ವಿಷಯ ಸರ್ಕಾರದ ಗಮನಕ್ಕೆ ಬಂದ ಮೇಲೆ ನನ್ನ ಕೊಠಡಿಯಲ್ಲಿ ಶ್ರೀಮಾನ್ ಆತ್ಮಾನಂದರವರನ್ನು ಮತ್ತು ಶ್ರೀ ಹೇಕ್.ಡಿ. ಚೌಡಯ್ಯನವರನ್ನೂ ಸಮಕ್ಷಮ ಕರೆಸಿ ಶುಗರ್ ಫ್ಯಾಕ್ಟರಿ ಸಿ.ಎಂ.ಡಿ. ಯವರನ್ನು ಕರೆಸಿ ಅರ್ಧ ಗಂಟೆ ಸವಿಸ್ತಾರವಾಗಿ ಚರ್ಚೆ ಆದ ನಂತರ ಅವರಿಗೆ ತೃಪ್ತಿಯಾದ ಮೇಲೆ ನಾನು ಸಭೆಯನ್ನು ಮುಗಿಸಿ ಬಂದಿದ್ದೇನೆ. ಆದರೆ ಇವತ್ತು ಅವರು ಏಕೆ ಆ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಅವತ್ತಿನ ದಿವಸ ಅವರ ಎಲ್ಲಾ ಸಮಸ್ಯೆಗಳ ಬಗ್ಗೆ ಒಪ್ಪಿಕೊಂಡು ಸಿ.ಎಂ.ಡಿ.ಯವರು ಆಶ್ವಾಸನೆ ಕೊಟ್ಟರು. 20ನೇ ತಾರೀಖು ಫಿನು ಜನರಲ್ ಬಾಡಿ ಮೀಟಿಂಗ್ ಆಗುತ್ತದೆ ಆ ದಿವಸ ಯಾವ ತರಹದ ಅಹಿತಕರ ಘಟನೆ ಜರುಗದಂತೆ ನೋಡಿಕೊಳ್ಳುವುದಾಗಿ ಅವರ ಸಮಕ್ಷಮದಲ್ಲಿ ಹೇಳಿದ್ದಾರೆ. ಆದರೂ ಅವರಿಗೆ ಏಕಕ್ಕೋ ಸಂಶಯವೆಂದು ನನಗೆ ಅರ್ಥವಾಗುತ್ತಿಲ್ಲ.

4. ಬಾಂಬೆ ಮತ್ತು ಕಲ್ಕತ್ತದಲ್ಲಿ ನಡೆದಂಥ ಬಾಂಬ್ ಪ್ರಕರಣದ ಹಿನ್ನೆಲೆಯಲ್ಲಿ ನಗರದಲ್ಲಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅಧ್ಯಕ್ಷರೇ, ನಿನ್ನೆ ವಿಧಾನ ಪರಿಷತ್ತಿನಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟು ರಾಜ್ಯದಲ್ಲಿರತಕ್ಕಂಥ ಕಾನೂನು ಪರಿಸ್ಥಿತಿಯ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ. ಜೊತೆಗೆ ಬಾಂಬೆಯಲ್ಲಿ ಮತ್ತು ಕಲ್ಕತ್ತದಲ್ಲಿ ನಡೆದಿರತಕ್ಕಂಥ ಬಾಂಬ್ ಪ್ರಕರಣದ ಹಿಂದಗಡೆ ರಾಜ್ಯದಲ್ಲಿ ತೆಗೆದುಕೊಂಡಿರತಕ್ಕಂತ ಕಾರ್ಯಕ್ರಮಗಳು ಮತ್ತು ಅಂತಹ ಗುಂಪುಗಳು ಏನಾದರೂ ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರೆ ಕಂಡಲ್ಲಿ ಗುಂಡು ಹಾಕತಕ್ಕಂಥ ಆದೇಶವನ್ನು ಕೊಟ್ಟಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇವತ್ತಿನ ದಿವಸ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಮುಖಪುಟದಲ್ಲಿ ಮುಖ್ಯವಾಗಿರತಕ್ಕಂಥ ಸುದ್ದಿ ಪ್ರಕಟಣವಾಗಿದೆ. ಮುಂಬೈ ಘಟನೆ ಆದ ನಂತರ ಮಧ್ಯಪ್ರದೇಶಕ್ಕೆ, ಗುಜರಾತಿಗೆ ಮತ್ತು ಕರ್ನಾಟಕ ರಾಜ್ಯಕ್ಕೆ ಆಸ್ಫೋಟಕಗಳನ್ನು ಒಳಗೊಂಡ ಬಾಂಬ್‌ಗಳಿರತಕ್ಕ ಕನ್‌ಸೈನ್‌ಮೆಂಟ್ ಬೆಂಗಳೂರಿಗೆ ತಲುಪಿದೆ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನತಕ್ಕಂಥಾದ್ದು ಒಂದು ಪ್ರಶ್ನೆ. ಎರಡನೆಯದಾಗಿ ಇದರ ಬಗ್ಗೆ ತೆಗೆದುಕೊಂಡಿರತಕ್ಕಂಥ ಕ್ರಮಗಳು ಕೆಲವು ಸೂಕ್ಷ್ಮ ವಿಚಾರಗಳು ಏನು ಇರುತ್ತವೆ ಅದರ ಬಗ್ಗೆ ಸದನಕ್ಕೆ ಬಹಿರಂಗವಾಗಿ ಸರ್ಕಾರಕ್ಕೆ ಹೇಳುವುದಕ್ಕಾಗುವುದಿಲ್ಲ. ಅದು ಕಾನೂನು ಹಿತದೃಷ್ಟಿಯಿಂದ ಹೇಳತಕ್ಕಂಥ ಅವಶ್ಯಕತೆಯೂ ಇಲ್ಲವೆಂದು ನಾನು ತಿಳಿದುಕೊಂಡಿರತಕ್ಕವನು.

ಆದರೆ, ಮುಖ್ಯ ಮಂತ್ರಿಯವರು ಸವಿಸ್ತಾರವಾಗಿ ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ. ವಿಶೇಷವಾಗಿ ಇವತ್ತು ಎಕ್ಸ್‌ಪ್ಲೋಸಿವ್ಸ್ ಕರ್ನಾಟಕಕ್ಕೆ ಸಹಿತ ಬಂದಿವೆ. ಇದರ ಬಗ್ಗೆ ಎರೋಪ್ಲೇನ್‌ಗಳಲ್ಲಿ ಬರತಕ್ಕಂಥವರನ್ನು, ಟ್ರೈನ್‌ನಲ್ಲಿ ಬರತಕ್ಕಂಥವರನ್ನು ಚೆಕ್ ಮಾಡುತ್ತೇವೆ ಮತ್ತು ಸಸ್ಪೆಕ್ಟೆಡ್ ಎಲಿಮೆಂಟ್ಸ್‌ನ್ನು ಅರೆಸ್ಟ್ ಮಾಡುತ್ತೇವೆಂದು ಏನು ಹೇಳಿದ್ದಾರೆ ಇವರ ಬಗ್ಗೆಯೂ ಸಹಿತ ಈ ಸದನಕ್ಕೆ ತಿಳಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಜೊತೆಗೆ ಈ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಯಾರಿದ್ದಾರೆ; ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಕಾವೇರಿ ಗಲಾಟೆಯಾದ ಸಂದರ್ಭದಲ್ಲಿ ಎರಡು ದಿನ ಮುಂಚಿತವಾಗಿ ಆಂಟಿ ಸೋಷಿಯಲ್ ಎಲಿಮೆಂಟ್ಸ್‌ನ್ನು ಅರೆಸ್ಟ್ ಮಾಡಿದ್ದಿದ್ದರೆ ಅಂಥಾ ಘಟನೆಗಳೇ ನಡೆಯುತ್ತಿರಲಿಲ್ಲ. ಅದರಿಂದಾಗಿ ಇವತ್ತು ಆ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆಯೇ ಎನ್ನುವುದು ನಮಗೆಲ್ಲಾ ತಿಳಿಯಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು

ಇಲ್ಲಿ ಇಲ್ಲ. ಆದರೆ ಸಂಸದೀಯ ವ್ಯವಹಾರಗಳ ಮಂತ್ರಿಯವರು ಇದರ ಬಗ್ಗೆ ಸದನಕ್ಕೆ ತಿಳಿಸಬೇಕು. ಸರ್ಕಾರದ ವಿಚಾರ ಏನು? ಸರ್ಕಾರದ ಗಮನಕ್ಕೆ ಈ ವಿಷಯ ಬಂದಿದೆಯೇ ಎನ್ನುವುದನ್ನು ನಮಗೆಲ್ಲರಿಗೂ ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

† ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ಉಪ ನಾಯಕರಾದ ಸಿಂಧ್ಯಾರವರು ಪ್ರಸ್ತಾಪ ಮಾಡಿದ ಹಾಗೆ, ಯಾವ ಎಕ್ಸ್‌ಪ್ಲೋಸಿವ್ಸ್ ಬಾಂಬೆಯಲ್ಲಿ ಉಪಯೋಗ ಮಾಡಲಾಯಿತೋ ಅದೇ ಎಕ್ಸ್‌ಪ್ಲೋಸಿವ್ಸ್ ಈಗಾಗಲೆ ಕರ್ನಾಟಕಕ್ಕೂ ಬಂದಿದೆಯೆಂದು ಟೈಮ್ಸ್ ಆಫ್ ಇಂಡಿಯಾದಲ್ಲಿ ಸುದ್ದಿ ಬಂದಿದೆ. ಇದನ್ನು ಪೋಲೀಸ್ ಅಧಿಕಾರಿಗಳು ಗಮನಿಸಿ ಮಂಗಳೂರು, ಬೆಳಗಾಂ, ಹುಬ್ಬಳ್ಳಿ, ಕಾರವಾರದಲ್ಲಿ ಸಾಕಷ್ಟು ಸೆಕ್ಯುರಿಟಿ ಮೆಷರ್ ತೆಗೆದುಕೊಳ್ಳಬೇಕಾಗುತ್ತದೆ. ಇನ್ನೂ ಅವು ಬಂದಿಲ್ಲವೆಂದರೆ ಬಾರ್ಡರ್ ಏರಿಯಾದಲ್ಲಿ ಸೆಕ್ಯುರಿಟಿ ಮೆಷರ್‌ಅನ್ನು ಟೈಟ್ ಮಾಡಬೇಕು. ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೋ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಸಮಯ ಚರ್ಚೆಯಾಗಿದೆ. ನಿನ್ನೆ ಮಾನ್ಯ ಮುಖ್ಯ ಮಂತ್ರಿಯವರು ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕಾಗಿತ್ತು. ಏಕೆಂದರೆ ಈಗಾಗಲೇ ಮೇಲ್ಮನೆಯಲ್ಲಿ ಸ್ಟೇಟ್‌ಮೆಂಟ್ ಆಗಿದೆ. ಇವತ್ತು ಈ ಸಂಬಂಧ ಎಲ್ಲಾ ವಿಚಾರಗಳನ್ನು ಇಲ್ಲಿ ಹೇಳಲಿಕ್ಕೆ ಬರುವುದಿಲ್ಲ; ಹೇಳಲೂಬಾರದು. ಕೆಲವು ವಿಚಾರವನ್ನು ನಿಮ್ಮಲ್ಲೇ ಇಟ್ಟುಕೊಳ್ಳಬೇಕಾಗುತ್ತದೆ. ಅದೆಲ್ಲ ಹೇಳಿದರೆ ನಿಮಗೆ ಕ್ರಮ ತೆಗೆದುಕೊಳ್ಳಲಿಕ್ಕೂ ಆಗುವುದಿಲ್ಲ. ಕೊನೆಯಪಕ್ಷ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಏನು ನಡೆಯುತ್ತಿದೆ; ನೀವು ಏನು ಕ್ರಮ ತೆಗೆದುಕೊಂಡಿರಿ, ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ ಎಂದು ನಮಗೆ ಹೇಳಬೇಕಾಗುತ್ತದೆ. ಈಗ ಎಲ್ಲಾ ಕಡೆ ಒಂದು ಭಯದ ವಾತಾವರಣ ನಿರ್ಮಾಣ ಆಗಿದೆ. ನಾನು ಇವತ್ತು ಬಾಂಬೆಗೆ ಹೊರಟಿದ್ದೇನೆ. ನಮ್ಮ ಮಿಸೆಸ್ ಹೇಳಿದರು, ಬಾಂಬೆಗೆ ಏಕೆ ಹೋಗುತ್ತೀರಿ, ಅಷ್ಟು ತೊಂದರೆ ಬೇಡ ಎಂದು. ಅಂದರೆ ಇಂತಹ ವಾತಾವರಣ ಪ್ರತಿಯೊಂದು ಕಡೆ ಆಗಿದೆ. ಆ ಭಯದ ವಾತಾವರಣ ಹೋಗುವುದಕ್ಕಾಗಿ ಸರ್ಕಾರ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸಾರ್ವಜನಿಕರು ಭಯಪಡುವ ಕಾರಣವಿಲ್ಲ, ನಾವು ಇಂಥಾ ಕ್ರಮ ತೆಗೆದುಕೊಂಡಿದ್ದೇವೆ ಎಂಬ ಮಾತು ಮುಖ್ಯ ಮಂತ್ರಿಗಳ ಕಡೆಯಿಂದ ಬರಬೇಕಾಗುತ್ತದೆ. ಇವತ್ತು ಮುಖ್ಯ ಮಂತ್ರಿಗಳು ಇದ್ದರೆ ಅವರ ಮುಖಾಂತರ ಒಂದು ಸ್ಟೇಟ್‌ಮೆಂಟ್ ಅನ್ನು ಈ ಸದನದಲ್ಲಿ ಮಾಡಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೇ, ಈ ಬಗ್ಗೆ 3 ದಿನಗಳ ಹಿಂದೆ ಈ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯ ಸರ್ಕಾರ ಕೈಗೊಂಡಿರತಕ್ಕಂಥ ಕ್ರಮಗಳ ಬಗ್ಗೆ ಒಂದು ಹೇಳಿಕೆ ನೀಡಬೇಕೆಂದು ನಾವು ಒತ್ತಾಯ ಮಾಡಿದ್ದೇವೆ. ಆದರೆ ಅದನ್ನು ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ. ಅತಿ ಮುಖ್ಯವಾಗಿ ಕರ್ನಾಟಕದಲ್ಲಿ ವಿಧಾನಸೌಧ ಇದೆ, ಅನೇಕ ಜಲಾಶಯಗಳು ಇವೆ, ಕರ್ನಾಟಕದ ಮೂಲೆ ಮೂಲೆಯಲ್ಲಿ ಅನೇಕ ದೊಡ್ಡ ಮಹಡಿಗಳು ಇವೆ, ಮತ್ತು ಅನೇಕ ಪ್ರಮುಖವಾದ ಸ್ಥಳಗಳಿವೆ. ಹಿಂದೆಯೂ ಸಹ ನಮ್ಮ ಅನೇಕ ಜಲಾಶಯಗಳ ಬಗ್ಗೆ ಒಂದು ದೊಡ್ಡ ಬೆದರಿಕೆ ಬಂದಿತ್ತು. ಕರ್ನಾಟಕದಲ್ಲಿ ಭಯೋತ್ಪಾದಕರು ಇಲ್ಲವೆಂಬ ಮಾತನ್ನು ನಾನಂತೂ ತಳ್ಳಿಹಾಕುವುದಕ್ಕಾಗುವುದಿಲ್ಲ. ಸರ್ಕಾರದವರೂ ಸಹ ಅದನ್ನು ತೆರೆಮೆರೆಯಲ್ಲಿ ಒಪ್ಪಿಕೊಂಡಿದ್ದಾರೆ. ಭಯೋತ್ಪಾದಕರ ನೆಲೆ ಕರ್ನಾಟಕದ ಕೆಲವು ಗಡಿ ಭಾಗಗಳಲ್ಲಿ ಇದೆ ಎಂದು ಕರ್ನಾಟಕದಲ್ಲಿ ಹಿಂದೆ ಗೃಹ ಸಚಿವರಾಗಿದ್ದ ಧರ್ಮಸಿಂಗ್‌ರವರು ಒಪ್ಪಿಕೊಂಡಿದ್ದರು. ಇಂಥ ಭಯೋತ್ಪಾದಕರ ನೆಲೆ ಇಲ್ಲಿರುವಾಗ ನಾವು ಕರ್ನಾಟಕದಲ್ಲಿ ಯಾವ ರೀತಿ ಇದ್ದೇವೆ? ಗಡಿ ಪ್ರದೇಶವನ್ನು ಬಂದ್ ಮಾಡತಕ್ಕಂಥಾದ್ದು, ಹೊರಗಡೆಯಿಂದ ಬರತಕ್ಕಂಥ ಎಲ್ಲರನ್ನೂ ತಪಾಸಣೆ ಮಾಡತಕ್ಕಂಥಾದ್ದು ಆಗಬೇಕು. ಬೆಂಗಳೂರಿನಲ್ಲಿ 50ಲಕ್ಷ ಜನ ವಾಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ

ಯಾರು ಎಲ್ಲಿದ್ದಾರೆ ಎಂದು ನಿಮಗೆ ಗೊತ್ತಿಲ್ಲ. ಬೆಂಗಳೂರಿನ ಯಾವ ಯಾವ ಮೂಲೆಯಲ್ಲಿ ಯಾರ್ಯಾರಿದ್ದಾರೆ ಎಂಬುದು ನಮ್ಮ ಪೋಲೀಸರಿಗೆ ಗೊತ್ತಿಲ್ಲ ಎನ್ನುವುದಕ್ಕೆ ಉದಾಹರಣೆ, ಹಿಂದೆ ನಡೆದಂಥ ದೊಡ್ಡ ದುರಂತವೇ ಸಾಕ್ಷಿಯಾಗಿದೆ. ರಾಜೀವ್ ಗಾಂಧಿಯವರನ್ನು ಕೊಲೆ ಮಾಡುವುದರಲ್ಲಿ ಪಾತ್ರ ವಹಿಸಿದಂತ ಶಿವರಾಸನ್ ಬೆಂಗಳೂರಿನಲ್ಲಿ ಇದ್ದದ್ದು ಎರಡು ತಿಂಗಳ ಕಾಲ ಪೋಲೀಸರಿಗೇ ಗೊತ್ತಿರಲಿಲ್ಲ.

ಅದು ಹಲಗೂರು ಹತ್ತಿರ ಮುತ್ತತ್ತಿ ಎನ್ನುವಂಥ ಗ್ರಾಮದ ಕೆಲವು ರೈತರಿಂದ ಹಾಗೂ ಜನರಿಂದ ಗೊತ್ತಾಯಿತು.. ಇಂತಹ ಪರಿಸ್ಥಿತಿ ಇರುವಾಗ ಬೆಂಗಳೂರಿನಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ಸದನಕ್ಕೆ ಸ್ಪಷ್ಟವಾಗಿ ಹೇಳಬೇಕು. ಇವತ್ತು ಇಡೀ ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ ಘೋಷಣೆ ಇದ್ದ ಹಾಗೆ ಇದೆ. ಯಾವ ರಸ್ತೆಯಲ್ಲೂ ಹೋಗುವುದಕ್ಕಾಗುತ್ತಿಲ್ಲ. ಕಾರುಗಳನ್ನು ರಸ್ತೆಗಳಲ್ಲಿ ನಿಲ್ಲಿಸುವುದಕ್ಕಾಗುವುದಿಲ್ಲ. ನಿಲ್ಲಿಸಿದ್ದ ಕಾರುಗಳನ್ನು ಯದ್ವಾತದ್ವ ಎಳೆದುಕೊಂಡು ಹೋಗುತ್ತಿದ್ದೀರಿ. ಬಾಂಬೆಯಲ್ಲಿ ಕಲ್ಕತ್ತಾದಲ್ಲಿ ಈ ಘಟನೆ ಆಯಿತು; ಇಂಥಾ ಸಂದರ್ಭದಲ್ಲಿ ಮಾತ್ರ ನೀವು ಎಚ್ಚರವಾಗಿರುತ್ತೀರಿ; ಸಂದರ್ಭ ಬರಲಿಲ್ಲ ಎಂದಾಗ ನೀವೆಲ್ಲರೂ ಎಚ್ಚರ ತಪ್ಪುತ್ತೀರಿ. ಯಾವಾಗಲೂ ಎಚ್ಚರವಾಗಿರುವುದಕ್ಕೆ ಸರ್ಕಾರದ ಪರಿಣಾಮಕಾರಿಯಾದ ಕ್ರಮಗಳೇನು ಎನ್ನುವುದನ್ನು ಈ ಸದನದ ಮುಂದೆ ಇಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹಾರನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿರತಕ್ಕಂಥ ಆತಂಕ ಎಲ್ಲರ ಮನಸ್ಸಿನಲ್ಲೂ ಇದೆ. ಇದಕ್ಕೆ ಸರ್ಕಾರ ಈಗಾಗಲೆ ಸೂಕ್ತ ಕ್ರಮ ತೆಗೆದುಕೊಂಡಿದೆ. ಅದನ್ನು ಮೇಲ್ಮನೆಯಲ್ಲಿ ತಿಳಿಸಲಾಗಿದ. ಈ ಮನೆಯಲ್ಲೂ ಅದನ್ನು ಹೇಳಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮುಖ್ಯ ಮಂತ್ರಿಗಳಿಗೆ ಈ ಬಗ್ಗೆ ಹೇಳಿಕೆ ಕೊಡಲಿಕ್ಕೆ ತಿಳಿಸುತ್ತೇನೆ. ನಾಳೆ ಪ್ರಧಾನ ಮಂತ್ರಿಯವರು ಬರುತ್ತಿರುವುದರಿಂದ ಈ ರೀತಿ ಎಲ್ಲಾ ರೀತಿಯ ಸೆಕ್ಯುರಿಟಿ ಮೇಷರ್ ತೆಗೆದುಕೊಳ್ಳುವುದಕ್ಕೆ ಹಗಲಿರುಳೂ ವ್ಯವಸ್ಥೆ ಮಾಡಲಾಗುತ್ತಿದೆ. ಅವರು ಬಹುಶಃ ಅದೇ ಉದ್ದೇಶಕ್ಕೆ ಹೊರಗಡೆ ಹೋಗಿದ್ದಾರೋ ಏನೋ ಗೊತ್ತಿಲ್ಲ. ಹೋಗಿದ್ದರೆ ಸೋಮವಾರದ ದಿನ ಹೇಳಿಕೆ ನೀಡಲು ಹೇಳುತ್ತೇವೆ. ಹೋಗದಿದ್ದರೆ ಈಗಲೇ ಬಂದು ಹೇಳುವುದಕ್ಕೆ ತಿಳಿಸುತ್ತೇವೆ. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಇವತ್ತಿನ ಪತ್ರಿಕೆಗಳಲ್ಲಿ ಬಂದಿರುವುದು ನಮ್ಮ ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಏನು ಕ್ರಮ ಎಂದು ಹೇಳುವ ಅವಶ್ಯಕತೆ ಇಲ್ಲ. ಸರ್ಕಾರ ಇದರ ಬಗ್ಗೆ ವಿಜಿಲೆಂಟ್ ಆಗಿದೆ; ಕಾಳಜಿಯಿಂದ ಇದೆ, ಸರ್ಕಾರದ ಎಲ್ಲ ದೃಷ್ಟಿಯೂ ಈ ಬಗ್ಗೆಯೇ ಇದೆಯೆಂದು ಹೇಳುತ್ತೇನೆ.

ಡಾ. ಜೀವರಾಜ ಆಳ್ವ:– ಪತ್ರಿಕೆಗಳಲ್ಲಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದರೆ, it reflects on the Government. I am sorry, I am afraid....

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಪತ್ರಿಕೆಗಳಲ್ಲಿ ಬಂದಿರುವುದನ್ನು ಕ್ವೋಟ್ ಮಾಡಿದರು. ಅದೂ ಗಮನಕ್ಕೆ ಬಂದಿದೆ ಎಂದು ಹೇಳಿದೆ. ಇದಲ್ಲದೆ ಇನ್ನೂ ಬೇಕದಾಷ್ಟು ವಿಚಾರಗಳು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನೆಲ್ಲಾ ಇಲ್ಲಿ ಹೇಳುವ ಹಾಗಿಲ್ಲ.